ವಿಜಯವಾಣಿ
ಕನ್ನಡಿಗರ ಧ್ವನಿ

# ಕ್ರಿಕೆಟ್: ಎಸ್‌ಬಿಎಂ ಜೈನ್ ಕಾಲೇಜಿಗೆ ಗೆಲುವು

**ಬೆಂಗಳೂರು:** ಲಾಲ್ ಸಚಿನ್ (81ರನ್*, 11 ಬೌಂಡರಿ, 5 ಸಿಕ್ಸರ್, 15ಕ್ಕೆ 3) ಆಲ್‌ರೌಂಡ್ ಆಟದ ನೆರವಿನಿಂದ ವಿವಿಪುರಂನ ಎಸ್‌ಬಿಎಂ ಜೈನ್ ಕಾಲೇಜು ತಂಡ ಅಂತರ್ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ನ್ಯಾಷನಲ್ ಕಾಲೇಜು ತಂಡದ ವಿರುದ್ಧ 9 ವಿಕೆಟ್‌ಗಳ ಸುಲಭ ಗೆಲುವು ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ನ್ಯಾಷನಲ್ ಕಾಲೇಜು ತಂಡ 26 ಓವರ್‌ಗಳಲ್ಲಿ 102 ರನ್ ಸೇರಿಸಿತು. ಇದನ್ನು ಬೆನ್ನಟ್ಟಿದ ಎಸ್‌ಬಿಎಂ ಜೈನ್ ತಂಡ 8.1 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 107 ರನ್ ಬಾರಿಸಿ ಗೆಲುವು ಪಡೆಯಿತು.

ಉಳಿದ ಪಂದ್ಯದಲ್ಲಿ ಸುರಾನಾ ಕಾಲೇಜು, ಜೆಸಿ ರೋಡ್ ಎಸ್‌ಬಿಎಂ ಕಾಲೇಜು ಹಾಗೂ ಪ್ರೆಸಿಡೆನ್ಸಿ ಕಾಲೇಜು ತಂಡಗಳು ಗೆಲುವು ಸಾಧಿಸಿದವು.

**ನ್ಯಾಷನಲ್ ಕಾಲೇಜು: 26 ಓವರ್‌ಗಳಲ್ಲಿ 102** (ವೇದವ್ಯಾಸ್ 22, ಕೌಶಿಕ್ 24ಕ್ಕೆ 3, ಲಾಲ್ ಸಚಿನ್ 15ಕ್ಕೆ 3). **ಎಸ್‌ಬಿಎಂ ಜೈನ್ ಕಾಲೇಜು: 8.1 ಓವರ್‌ನಲ್ಲಿ 1 ವಿಕೆಟ್ ನಷ್ಟಕ್ಕೆ 107** (ಲಾಲ್ ಸಚಿನ್ 81*).
**ಪಿಇಎಸ್ ಕಾಲೇಜು: 28.3 ಓವರ್‌ಗಳಲ್ಲಿ 119** (ಸಚಿನ್ 18ಕ್ಕೆ 3, ಕುನಾಲ್ 17ಕ್ಕೆ 3). **ಸುರಾನಾ ಕಾಲೇಜು: 14.5 ಓವರ್‌ಗಳಲ್ಲಿ 3 ವಿಕೆಟ್‌ಗೆ 122** (ಆಶಿರ್ವಾದ್ 23, ಮಿಥುನ್ 27, ಕುನಾಲ್ 44, ಅಭಿಷೇಕ್ 28ಕ್ಕೆ 2).
**ಡಾ. ಅಂಬೇಡ್ಕರ್ ಕಾಲೇಜು: 9 ವಿಕೆಟ್‌ಗೆ 124** ( ಸತ್ಯಾ 35, ನವೀನ್ ಕುಮಾರ್ 28, ಅಕ್ಷಯ್ 13ಕ್ಕೆ 3). **ಎಸ್‌ಬಿಎಂ ಜೈನ್ ಕಾಲೇಜು:** 17 ಓವರ್‌ಗಳಲ್ಲಿ 2 ವಿಕೆಟ್‌ಗೆ 128 (ಸುಮುತ್ 43*, ಅಕ್ಷಯ್ 43*).
**ಪ್ರೆಸಿಡೆನ್ಸಿ ಕಾಲೇಜು: 2 ವಿಕೆಟ್‌ಗೆ 230** (ಪುನೀತ್ 112, ಅಕ್ಷಿತ್ 44, ಸುಜಿತ್ 36*). **ವಿಜಯಾ ಕಾಲೇಜು: 22.4 ಓವರ್‌ಗಳಲ್ಲಿ 98**(ತಿಮ್ಮಯ್ಯ 24ಕ್ಕೆ4).